# ಸುದ್ದಿ ಸಂಚಯ

**ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮ ಪೂಜ್ಯ ಶ್ರೀಮತ್ ಸ್ವಾಮಿ ಗಹನಾನಂದಜೀ ಮಹಾರಾಜ್ ಅವರು 2002ರ ಏಪ್ರಿಲ್ 24ರಿಂದ 27ರವರೆಗೂ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಬಯಸುವವರು ಆಶ್ರಮದ ಕಾರ್ಯಾಲಯವನ್ನು ಸಂಪರ್ಕಿಸಬೇಕಾಗಿ ವಿನಂತಿ.**



## ಮಾದಿಹಳ್ಳಿಯಲ್ಲಿ ಶ್ರೀರಾಮಕೃಷ್ಣರ ಮೂರ್ತಿಪ್ರತಿಷ್ಠಾಪನೆ

ತುಮಕೂರು ಜಿಲ್ಲೆಯ, ತುರುವೆಕೆರೆ ತಾಲೂಕಿನ ಜನಗದ್ದಲದಿಂದ ದೂರವಾದ ಮಾದಿಹಳ್ಳಿಯಲ್ಲಿ ಬದರಿಕಾಶ್ರಮವಿದೆ. ಅದರ ಸಂಸ್ಥಾಪಕರು ಶ್ರೀಸ್ವಾಮಿ ಓಂಕಾರಾನಂದಜಿಯವರು. ಸುತ್ತಲು ಹಸಿರು ಗುಡ್ಡಗಳು, ನಿರ್ಮಲ ತಂಗಾಳಿ, ಮನತಣಿಸುವ ಸುಂದರ ಹೂದೋಟ ಇವುಗಳ ನಡುವೆ ಆಶ್ರಮವು ಕಂಗೊಳಿಸುತ್ತಿದೆ. ಅದರ ಮಧ್ಯದಲ್ಲಿ ಒಂದು ಭವ್ಯ ದೇವಾಲಯ. ಸ್ವಲ್ಪ ಎತ್ತರದ ಪ್ರದೇಶದಲ್ಲಿರುವ ಅದು ಬಹುದೂರದಿಂದ ಜನರನ್ನು ಆದರದಿಂದ ಸ್ವಾಗತಿಸುತ್ತದೆ. ಆ ದೇವಾಲಯದಲ್ಲಿ ಶ್ರೀರಾಮಕೃಷ್ಣರ ಮೂರ್ತಿ ಪ್ರತಿಷ್ಠಾಪನೆಯು ಫೆಬ್ರುವರಿ ೨೭ರಂದು ನೆರವೇರಿತು. ಇದಕ್ಕೆ ಪೂರ್ವಭಾವಿಯಾಗಿ ದಿನಾಂಕ ೧೯ರಿಂದಲೇ ಪ್ರತಿದಿನ ಶತಚಂಡಿ ಹೋಮ, ಜಪ, ಚಂಡೀ ಪಾರಾಯಣ ಮುಂತಾದ ಧಾರ್ಮಿಕ ಕ್ರಿಯಾವಿಧಿಗಳು ಮತ್ತು ಭಜನೆ, ಗಮಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಫೆಬ್ರುವರಿ ೨೬ ಮತ್ತು ೨೭ ಪ್ರಧಾನ ಕಾರ್ಯಕ್ರಮವಿತ್ತು. ಮೈಸೂರು, ಬೆಂಗಳೂರು ಮುಂತಾದ ಕಡೆಗಳಿಂದ ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿಗಳು ಮತ್ತು ಭಕ್ತರು ಬಹು ಸಂಖ್ಯೆಯಲ್ಲಿ ನೆರೆದಿದ್ದರು. ೨೬ರಂದು ಬೆಳಗಿನಿಂದ ಸಂಜೆಯವರೆಗೂ ಆಶ್ರಮದ ಸ್ವಾಮಿಗಳಿಂದ ಭಜನೆ, ಉಪನ್ಯಾಸ ಮುಂತಾದ ಕಾರ್ಯಕ್ರಮಗಳಿದ್ದವು. ಮುಖ್ಯ ಉಪನ್ಯಾಸಕರುಗಳಾದ ಸ್ವಾಮಿ ಸುರೇಶಾನಂದರು, ಜಗದಾತ್ಮಾನಂದರು, ರಘುನಾಥಾನಂದರು ಮತ್ತು ರಾಘವೇಶಾನಂದರು ಮಾತನಾಡಿದರು. ಸ್ವಾಮಿ ಪುರುಷೋತ್ತಮಾನಂದರು ಮುಖ್ಯ ಭಜನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸ್ವಾಮಿಗಳಾದ ಆತ್ಮವಿದಾನಂದರು ಮತ್ತು ಧರ್ಮಾತ್ಮಾನಂದರು ಕೆಲವು ಭಜನೆ ಹಾಡುಗಳನ್ನು ಹಾಡಿದರು.



ಬದರಿಕಾಶ್ರಮದಲ್ಲಿ ಸಾಧುಸಮಾಗಮ

ಫೆಬ್ರುವರಿ ೨೭ ಒಟ್ಟು ಕಾರ್ಯಕ್ರಮದ ಕಿರೀಟಪ್ರಾಯವಾದ ದಿನ. ಅಂದು ಬೆಳಗ್ಗೆ ೫ ಘಂಟೆಗೆ ಮಂಗಳಾರತಿ, ಸುಪ್ರಭಾತ ಮತ್ತು ಭಜನೆಗಳಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಸ್ವಾಮಿಗಳು ಮತ್ತು ಭಕ್ತರು ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಭಾವಚಿತ್ರಗಳೊಂದಿಗೆ, ವೇದಘೋಷದೊಂದಿಗೆ ದೇವಸ್ಥಾನದ ಸುತ್ತ ಮೆರವಣಿಗೆ ಹೋದರು. ಅನಂತರ ದೇವಾಲಯದಲ್ಲಿ ಹೋಮ. ಇದಾದಮೇಲೆ ಸ್ವಾಮಿ ಸುರೇಶಾನಂದಜಿಯವರಿಂದ ವಿಧ್ಯುಕ್ತವಾಗಿ ಶ್ರೀರಾಮಕೃಷ್ಣ ಮತ್ತು ಶ್ರೀಶಾರದಾದೇವಿಯವರ ಅಮೃತಶಿಲೆಯ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ಇದರ ನಂತರ ಸಾರ್ವಜನಿಕ ಸಭೆ. ಸಭೆಯಲ್ಲಿ ಸ್ವಾಮಿ ರಾಘವೇಶಾನಂದರು ಬರೆದ *ತ್ರಿವೇಣೀ ಸಂಗಮ* ಎಂಬ ಹೆಸರಿನ ದಿವ್ಯತ್ರಯರ ಜೀವನ ಬೋಧನೆಗಳನ್ನೊಳಗೊಂಡ ಗ್ರಂಥವನ್ನು ಸ್ವಾಮಿ ಸುರೇಶಾನಂದರು ಬಿಡುಗಡೆ ಮಾಡಿದರು. ಆ ಸಂದರ್ಭದಲ್ಲಿ ಸ್ವಾಮಿ ಸುರೇಶಾನಂದರು ಮಾತನಾಡಿ, ಧರ್ಮದ ಹೆಸರಿನಲ್ಲಿರುವ ಮೂಢ ನಂಬಿಕೆಗಳನ್ನೂ ಮೂಢ ಆಚರಣೆಗಳನ್ನೂ ದೂರಮಾಡಿ ನೈಜ ಆಧ್ಯಾತ್ಮಿಕತೆಯನ್ನು ಅನುಸರಿಸಬೇಕೆಂದು ಜನರಿಗೆ ಕರೆ ನೀಡಿದರು. ಅನಂತರ ಸ್ವಾಮಿ ಓಂಕಾರಾನಂದಜಿಯವರು ಮಾತನಾಡಿ ತಾವು ಶ್ರೀರಾಮಕೃಷ್ಣರ ಪ್ರಭಾವವಲಯಕ್ಕೆ ಬಂದ ಬಗೆಯನ್ನು ತಿಳಿಸಿ, ತಮ್ಮ ಆಶ್ರಮದ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ, ನೆರೆದಿದ್ದ ಸುಮಾರು ೫೦೦೦ ಭಕ್ತರು ಭೋಜನಪ್ರಸಾದವನ್ನು ಸ್ವೀಕರಿಸಿದರು.